# ಮಹೋನ್ನತ

## ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ನೋಟ




ಪ್ರಧಾನ ಸಂಪಾದಕರು

• ಪ್ರೊ. ಬಿ.ಬಿ. ಡೆಂಗನವರ • ಡಾ. ಆರ್. ವಿ. ಪಾಟೀಲ

# ಮಹೋನ್ನತ

## ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ನೋಟ

ಡಾ। ತಿಪ್ಪೇಸ್ವಾಮಿ ಡಿ. ಎಸ್.
ಸಹಾಯಕ ಪ್ರಾಧ್ಯಾಪಕರು
ವಿ. ಎಂ. ಕೆ. ಎಸ್ ಆರ್. ವಸ್ತ್ರದ
ಕಲಾ, ವಿಜ್ಞಾನ ಹಾಗೂ ವಿ. ಎಸ್. ಬಿ.
ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ
ಬಾಗಲಕೋಟೆ-ಜಿಲ್ಲೆ

ಗೌರವ ಸಂಪಾದಕರು
ಡಾ. ಎಸ್. ಟಿ. ಮೇರವಾಡೆ

ಪ್ರಧಾನ ಸಂಪಾದಕರು
ಪ್ರೊ. ಬಿ. ಬಿ. ಡೆಂಗನವರ
ಡಾ. ಆರ್. ವಿ. ಪಾಟೀಲ

ಸಹ ಸಂಪಾದಕರು
ಡಾ. ಎಸ್. ಎಂ. ನಾಲತವಾಡ
ಡಾ. ಎಂ. ಎಸ್. ಮಾಗಣಗೇರಿ

೨೦೧೮

ಪ್ರಕಾಶಕರು
ಸೌಮ್ಯ ಪ್ರಕಾಶನ, ವಿಜಯಪುರ

**MAHONNATA :** Cheif Edited by : Prof. B. B. Denganavar, Basaveshwar degree College Basavan Bagevadi.Dr. R. V. Patil, J.S.S. Degree College, Vidyagiri-Dharwad

Co-Editor : Dr. M. S. Maganageri, Dr. S. M. Nalatavad
Publisher : Soumya Prakashan **BJP-F-27-2012-13**
Mahabaleswar Colony, Vijayapur
First Edition : 2018
© : Publisher
Copies : 1000
Pages : xviii + 386
Price : **Rs. 300/-**
Book Size : Demy 1/8
Paper Used : 70 GSM N.S. Maplitho
ISBN : 978-93-83813-32-2

ಮಹೋನ್ನತ : ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ನೋಟ
ಪ್ರಧಾನ ಸಂಪಾದಕರು: ಪ್ರೊ. ಬಿ.ಬಿ.ಡೆಂಗನವರ
ಡಾ. ಆರ್. ವಿ. ಪಾಟೀಲ
ಸಹ ಸಂಪಾದಕರು : ಡಾ. ಎಸ್. ಎಂ. ನಾಲತವಾಡ
ಡಾ. ಎಂ. ಎಸ್. ಮಾಗಣಗೇರಿ
ಪ್ರಕಾಶಕರು : ಸೌಮ್ಯ ಪ್ರಕಾಶನ ಬಿಜೆಪಿ-ಎಫ್-೨೭-೨೦೧೨-೧೩
ಮಹಾಬಳೇಶ್ವರ ಕಾಲೋನಿ, ವಿಜಯಪುರ
ಮೊದಲ ಮುದ್ರಣ : ೨೦೧೮
ಹಕ್ಕುಗಳು : ಪ್ರಕಾಶಕರವು
ಪ್ರತಿಗಳು : ೧೦೦೦
ಪುಟಗಳು : xviii + ೩೮೬
ಬೆಲೆ : ರೂ. ೩೦೦/-
ಪುಸ್ತಕದ ಆಕಾರ : ಡೆಮಿ ೧/೮
ಬಳಸಿದ ಕಾಗದ : ೭೦ ಜಿ.ಎಸ್.ಎಮ್. ಎನ್.ಎಸ್.ಮ್ಯಾಪಲಿಥೋ

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 8884495331, 9448223602

Kannada Literature and Hard Work Culture

- Dr. Thippeswamy D. S.

# ಕನ್ನಡ ಸಾಹಿತ್ಯ ಮತ್ತು ಶ್ರಮ ಸಂಸ್ಕೃತಿಯ ಅವಗಾಹನೆಗಳು

• ಡಾ. ತಿಪ್ಪೇಸ್ವಾಮಿ ಡಿ.ಎಸ್.

ಕರ್ನಾಟಕ ಸಿರಿ ಸಂಪತ್ತುಗಳಿಂದ ಕೂಡಿದ ಸುಂದರ ನಾಡು. ರಾಜ ಮಹಾರಾಜರು ವೀರಯೋಧರು, ಸಾಧುಸಂತರು ಬಾಳಿ ಬೆಳಗಿದ ಭೂಮಿ ಇದೆಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕ ಶ್ರಮ ಸಂಸ್ಕೃತಿಯ ಶ್ರೀಮಂತ ನೆಲೆಬೀಡು. ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಅದರ ಸಾಹಿತ್ಯದಲ್ಲಿ ಮಾನವನು ಕಂಡುಕೊಂಡ ಅಭಿವ್ಯಕ್ತಿಯ ಸಾಧನೆಗಳಲ್ಲೆಲ್ಲಾ ಉಕ್ತಿಯೇ ಅತ್ಯಂತ ಪ್ರಭಾವಶಾಲಿಯಾದುದು ಮಾತಿಗೂ ಮೀರಿದ ಭಾವನೆಗಳಿವೆ ನಿಜ, ಸಂಗೀತ ಶಿಲ್ಪಿ ಚಿತ್ರ ನಾಟ್ಯಾದಿ ಕಲೆಗಳು ಕೆಲವು ವೇಳೆ ಅಂತಹ ಭಾವಗಳನ್ನು ಪ್ರಕಾಶಗೊಳಿಸಬಲ್ಲುವೆಂಬುದನ್ನೂ ಒಪ್ಪಿಕೊಳ್ಳಬಹುದು. ಆದರೆ ಈ ಕೃತಿಗಳೆಲ್ಲಾ ಮಾತಿನ ಹಿನ್ನಲೆಯಲ್ಲಿ ನಿಂತು ಅದಕ್ಕೆ ಅತೀತವಾದುದರ ಕಡೆಗೆ ತಮ್ಮ ಕೈಯನ್ನು ಚಾಚುಬಲ್ಲುವೇ ಹೊರತು, ಸಂಪೂರ್ಣವಾಗಿ ವಾಗ್‌ರಹಿತವಾದ ನಿಲುವಿನಲ್ಲಿ ಅವು ನಿಲ್ಲಲಾರವು.

ಅಂದು ಕಾಯಕ ಜೀವನೋಪಾಯಕ್ಕೆ ದಾರಿಯಾದಂತೆ ದಾಸೋಹಕ್ಕೆ ಸೋಪಾನವೂ ಆಯಿತು. ಡೋಹಕ ಕಕ್ಕಯ್ಯ (ಡೋಹಾರ ಜಾತಿಯವನು) ಏತದಲ್ಲಿ ನೀರೆತ್ತಲು ಬಳಸುವ ಚರ್ಮದ ಚೀಲ ತಯಾರಿಸುವವನು, ಮಡಿವಾಳರ ಮಾಚಯ್ಯ ಶರಣರ ಬಟ್ಟೆ ಮಡಿ ಮಾಡುವವನು, ನುಲಿಯ ಚಂದಯ್ಯ ನೂಲಿನಿಂದ ಹಗ್ಗ ಹೊಸೆದು ಮಾರಿ ಬದುಕುವನನ್ನು ಆಯ್ದಕ್ಕಿ ಮಾರಯ್ಯ ಅಕ್ಕಿಯನ್ನು ಸಂಗ್ರಹಿಸುವ ಕಾಯಕ ಮಾಡುತ್ತಿದ್ದನು. ಮೋಳಿಗೆ ಮಾರಯ್ಯನು ಕಟ್ಟಿಗೆ ಮಾರಿ ಜೀವನ ಸಾಗಿಸುತ್ತಿದ್ದನು. ಅಮ್ಮದೇವಯ್ಯನು ಕ್ಷೌರಿಕ ಮಾರಿ ತಂದೆ ಬಸವಣ್ಣನವರ ಬಳಿಬರುವ ಮೊದಲು ಕಳ್ಳನಾಗಿದ್ದ ಇನ್ನೊಬ್ಬ ಮಾರಿ ತಂದೆ ನಗಿಸುವುದನ್ನೇ ಕಾಯಕವನ್ನಾಗಿ ಮಾಡಿಕೊಂಡಿದ್ದನು. ಕಣ್ಣಪ್ಪ ಮೀನು ಹಿಡಿಯುವನು, ಭೀಮಣ್ಣ ಹಾಗೂ ರಾಮಣ್ಣ ಗೋಪಾಲಕರು, ಕಲಕೇತಯ್ಯ ಓರ್ವ ಜನಪದ ಕಲಾಕಾರ, ಡಕ್ಕೆಯ ಬೊಮ್ಮಣ್ಣನು ಮೂಲತ: ಡಕ್ಕೆಯನ್ನು ಬಾರಿಸುವವನು ಕಾಮಾಟದ

ಭೀಮಣ್ಣ ಮನೆ ಕಟ್ಟುವ ವೃತ್ತಿಯವನು, ಕಾಮಿದೇವಯ್ಯ ಊರನ್ನು ಕಾಯುವ ತಳವಾರ, ಕಿನ್ನರಯ್ಯ ಕಿನ್ನರಿ ನುಡಿಸುತ್ತಿದ್ದನು ಕೂಗಿದ ಮಾರಯ್ಯನು ಕಲ್ಯಾಣದ ಕ್ರಾಂತಿಯ ಕಾಲದಲ್ಲಿ ಶರಣರೊಡನಿದ್ದುಕೊಂಡು ಬಿಜ್ಜಳನ ಸೈನ್ಯ ಬಂದಾಗ ಉಚ್ಚ ಧ್ವನಿಯಲ್ಲಿ ಕೂಗು ಹಾಕುತ್ತಿದ್ದನು. ಕೋಲಶಾಂತಯ್ಯನು ಕೋಲು ಹಿಡಿದು ಮಾಲದಾರ ನಿಯೋಗ ನಡೆಸುತ್ತಿದ್ದನು. ಘಟ್ಟಿವಾಳಯ್ಯನು ಮದ್ದಳೆ ನುಡಿಸುತ್ತ, ಶಿವಾನುಭಾವವನ್ನು ಸಾರಿ ಹೇಳುತ್ತಿದ್ದನು. ಜೇಡರ ದಾಸಿಮಯ್ಯನು ನೇಯ್ಗೆ ಕಾಯಕದವನು – ಹೀಗೆ ವಚನ ಸಾಹಿತ್ಯದಲ್ಲಿ ಮೇಲುವರ್ಗಕ್ಕೆ ಸೇರಿದ ವಚನಕಾರರಿಗಿಂತ ಕೆಳಜಾತಿಗೆ ಸೇರಿದ ವಚನಕಾರರ ಸಂಖ್ಯೆ ಹೆಚ್ಚಾಗಿದ್ದು, ಒಂದು ಅರ್ಥದಲ್ಲಿ ಕಲ್ಯಾಣದಲ್ಲಿ ಸಮಾಜೋಧಾರ್ಮಿಕ ಚಳುವಳಿ ನಡೆದದ್ದು ಅವರ ಸಲುವಾಗಿಯೇ ಸಾಮಾಜಿಕ ನೆಲೆಯ ಬೇರೆ ಬೇರೆ ಸ್ತರಗಳಿಂದ ಬಂದ ಈ ಎಲ್ಲ ವಚನಕಾರರು ತಮ್ಮ ಕಾಯಕದಿಂದ ಕಲ್ಯಾಣದಲ್ಲಿಯೇ ಕೈಲಾಸ ಕಾಣಿಸಿದ ಮಹಾನುಭಾವರು. ಇವರ ನೇತೃತ್ವವನ್ನು ವಹಿಸಿಕೊಂಡು, ಸನಾತನ ಧರ್ಮ ಪೋಷಿಸಿಕೊಂಡು ಬಂದಿದ್ದ ಸಾಮಾಜಿಕ ಅನ್ಯಾಯಗಳಿಗೆ ಮಂಗಳ ಹಾಡುವ ಮೂಲಕ ಮಾನವೀಯತೆಯನ್ನು ಮೆರೆದವರು, ಸಂವಿಧಾನದ ಮೂಲ ಪುರುಷ ಬಸವಣ್ಣನವರು ಆದ್ದರಿಂದ ಇತರ ಶರಣರು ರೂಪಿಸಿದ ನೀತಿನಿಯಮಗಳೆ ಶ್ರಮ ಸಂಸ್ಕೃತಿಗೆ ಪ್ರೇರಕರಾದವರು ಬಸವಣ್ಣ ಅವರು. ಗಾಂಧಿತತ್ವವನ್ನು ಅನುಸರಿಸುವುದಾದರೆ 'ದುಡಿಯದೆ ತಿನ್ನುವವರನ್ನು ಕಳ್ಳರೆಂದು' ಕರೆದಿದ್ದಾರೆ. ನಮ್ಮ ಅಗತ್ಯಕ್ಕಿಂತ ಹೆಚ್ಚಿಗೆ ಸಂಗ್ರಹಿಸುವ ದವಸ ಧಾನ್ಯಗಳಾಗಲಿ, ಬಟ್ಟಬರೆಗಳಾಗಲಿ ನಾವು ಸಂಗ್ರಹಿಸಿಟ್ಟುಕೊಂಡರೆ, ಅರೆಬೆತ್ತಲೆಯವನ್ನು, ಉಪವಾಸದಿಂದರುವವರನ್ನು ಕಂಡಾಗ ನಾನು ಅದಕ್ಕೆ ಸ್ವಲ್ಪ

ಬೇಟೆ ಕಾಯಕದ ತೆಲುಗ ಜೊಮ್ಮಣ್ಣ, ಬಿದಿರ ಕಾಯಕದ ವಂಶವರ್ಧನ, ಚಿನ್ನಕಾಯಕದ ಕಲ್ಲಯ್ಯ, ಬಣಜಿಗರ ಆದಯ್ಯ, ತಿಲಕಾಯಕದ ಮಾರುಡಿಗೆ ನಾಚಿತಂದೆ, ಧನಿಕನಾಗಿದ್ದ ಬಾಹೂರ ಬೊಮ್ಮಿತಂದೆ, ವ್ಯಾಪಾರ ವಹಿವಾಟು ಮಾಡುವ ಜೈನ ಸಮೂಹ ಹೀಗೆ ಸ್ವಯಂ ವ್ಯಕ್ತಿಯಲ್ಲಿರುವವರ ಚಿತ್ರಣ ರಗಳೆಗಳಲ್ಲುಂಟು. ತಿಲಕಾಯಕದ ಶ್ರೀಮಂತರ ಮಾರುಡಿಗೆಯ ನಾಚಿತಂದೆ ಉದ್ಯಮ ಪತಿಯಂತೆ ಭಾಸವಾಗುತ್ತಾನೆ. ಬಣಜಿಗ ಆದಯ್ಯನ ತಂದೆ ಶ್ರೀಮಂತರ ವ್ಯಾಪಾರಿಯಾಗಿದ್ದ. ವ್ಯವಹಾರದ ಲಾಭದ ಬಗ್ಗೆ ಆತ ಮಗನಿಗೆ ಹೇಳಿದಾಗ 'ಶಿವಭಕ್ತಿಯನುಂಬ ಲಾಭವೇ ಲಾಭ' ವೆಂಬ ಭಕ್ತಿಯ ಅಥೋನ್ನತಿ ಕುರಿತು ಹೇಳುತ್ತಾನೆ. ಸಂಪತ್ತನ್ನು ಗಳಿಸುವ ಸಂಗ್ರಹಿಸುವ ಹಪಾಹಪಿಯನ್ನು ಈ ಮೂಲಕ ಕಂಡುಕೊಳ್ಳಬಹುದು. ಬಿದಿರಕಾಯಕದ ವಂಶವರ್ಧನನು 'ಕಂಬಳಿ ಹೊದ್ದು ನಿರಾಭರಣ ನಿರಾಭರಣೆಯರಾಗಿ ಬಂದ ಕೇಶಿರಾಜ– ಗಂಗಾದೇವಿ ದಂಪತಿಗಳನ್ನು ಸ್ವಾಗತಿಸಿ ಕೇಶಾಂಬರ (ಕಂಬಳಿಯಂಥ ಹೊದಿಕೆ) ತೆಗೆಯಿಸಿ ದಿವ್ಯದುಕೂಲ(ರೇಶ್ಮೆ)

ಗಳನ್ನು ಉಡಕೊಟ್ಟು ವಾರಗಟ್ಟಲೆ 'ಗಣಪರ್ವ' ಮಾಡುವಷ್ಟು ಭಕ್ತಾಭಿಮಾನಿಯೂ, ತನ್ನ ಕಾಯಕದಿಂದ ಅರ್ಥಸಂಪನನ್ನು ಆಗಿರಬೇಕೆನಿಸುತ್ತದೆ. ಇಂತಹ ಸನ್ನಿವೇಶಗಳ ರಗಳೆಯ ಅಧ್ಯಾಯನದಲ್ಲಿ ಶ್ರಮ ಸಂಸ್ಕೃತಿಯ ರೂಪವನ್ನು ಕಾಣುತ್ತೇವೆ.

ಹಾವಿನಹಾಳದ ಶಿವನೋಜನು ಓರ್ವ ಅರ್ಕಸಾಲಿಯಾಗಿದ್ದು ಹೊನ್ನಕಾಯಕಿ ಎಂದು ಹರಿಹರ ಹೇಳುತ್ತಾನೆ. ಸಾಕಷ್ಟು ಅರ್ಥ ಸಂಪಾದನೆಯ ವೃತ್ತಿ ಇದಾಗಿತ್ತು. ಬಿಜ್ಜಳನು ತನ್ನ ಮನೆಯ ನಾಯಕನಾದ ಕಪಿಕಿಲನಾರುನನ್ನು ಉತ್ತರಿಗೆ' ಮಾಡಿಸಲು ಹಾವಿನಹಾಳಕ್ಕೆ ಕಳುಹಿಸಿದ ಪ್ರಸಂಗ ಕಲ್ಲಯ್ಯನ ರಗಳೆಯಲ್ಲಿ ಬಂದಿದೆ. ಭವಿಗಳಿಗೆ ತನ್ನ ಕಲೆಯನ್ನು ಮಾರಲಾರೆನೆಂಬ ಹಟದಲ್ಲಿ ಮಗ ಕಲ್ಲಯ್ಯ ಭವಿ ತಂದೆಯನ್ನು, ಬಿಜ್ಜಳನಂಥ ಅರಸನನ್ನು ಎದುರು ಹಾಕಿಕೊಳ್ಳುತ್ತಾನೆ. ಮಹಾದೇವಿಸೆಟ್ಟಿ ಎಂಬ ವ್ಯಾಪಾರಿ ಬಸವಣ್ಣನನ್ನು ಪರೀಕ್ಷೆಗೆ ಒಡ್ಡುವಷ್ಟು ಶ್ರೀಮಂತನಾಗಿದ್ದ ವಿವರವನ್ನು ಹರಿಹರನು ನೀಡುತ್ತಾನೆ. ಈ ಸಂದರ್ಭದಲ್ಲಿ ಬಸವಣ್ಣನು ಕಠಾರಿಯ ಮೇಲೆ ಕೈಯಿಟ್ಟು ತನ್ನ ಶಿವನಿಗೆ ಪ್ರತಿಜ್ಞೆಯಿಟ್ಟಾಗ 'ಹೊನ್ನಮಳೆ, ಮುತ್ತಿನಮಳೆ, ಮಾಣಿಕದ ಮಳೆ,ಕರೆಯಿತೇನೋ ಎಂಬಂತೆ ಬಸವನ ಮನೆ ಮುಂದೆ 'ರೋಹಣಾಚಲದ ಮಾಣಿಕ್ಯಗಳು ತಾಮ್ರಪರ್ಣಿಯ ಮುತ್ತುಗಳು, ನಂದಿಯುಂಡಿಗೆಯ ಮುಸಿಗಿಯ ಹೊನ್ನುಗಳು ಸುರಿದಿದ್ದವೆನ್ನುತ್ತಾನೆ ಕವಿ. ಹೀಗೆ ಸ್ವಯಂ ಉದ್ಯೋಗಿಗಳಾದ ಉದ್ಯಮಪತಿಗಳಾಗಿ ನೇರ ಬದುಕನ್ನು ಬದುಕುವ ಸಾಹಸಿಗಳ ಚಿತ್ರಣ ರಗಳೆಯಲ್ಲಿನ ಶ್ರಮ ಸಂಸ್ಕೃತಿಯ ಪ್ರಸಂಗಗಳು ಸಾಕಷ್ಟು ದೊರೆಯುತ್ತವೆ. ಹರಹರನ ಸೋದರಳಿಯ ಮತ್ತು ಶಿಷ್ಯನಾದ ರಾಘವಾಂಕ ಗುರುವಿಗಿಂತ ನಾಲ್ಕು ಹೆಜ್ಜೆ ಮುಂದೆ ನಡೆದ ಕನ್ನ ಸಾಹಿತ್ಯದಲ್ಲಿ ನಾಮಮಾತ್ರವಾಗಿದ್ದ ಷಟ್ಪದಿಗಳು ಹಿಂದಿನಿಂದ ಚೈತನ್ನಯವನ್ನು ಪಡೆದು ಝೇಂಕರಿಸಿದವು. ಹರಿಹರನ ರಗಳೆಯ ಛಂದಸ್ಸು ಅನಂತರದ ಕವಿಗಳನ್ನು ಅಷ್ಟಾಗಿ ಆಕರ್ಷಿಸಲಿಲ್ಲ.

ಕನ್ನಡ ಸಾಹಿತ್ಯ ವಾಹಿನಿಯು ಸಾಗರದಿಂದ ಕುಡಿಯೊಡೆದು ಮುಂದುವರೆದಿದು ರತ್ನಾಕರವರ್ಣಿ, ವಿರೂಪಾಕ್ಷಪಂಡಿತ, ಲಕ್ಷ್ಮೀಶ ಸರ್ವಜ್ಞ ಮೊದಲಾದ ಕವಿಗಳು ಅವರ ತುಂಬ ಪ್ರಭಾವವನ್ನು ಇನ್ನೂ ಗಂಭೀರಗೊಳಿಸಿದರು. ವಿಜಯನಗರದ ಪತನಾನಂತರ ಕನ್ನಡ ರಾಜ್ಯದ ಕೇಂದ್ರ ಶಕ್ತಿ ಬೇರೆ ಬೇರೆ ಕಡೆಗಳಿಗೆ ಹರಿದು ಹಂಚಿದಂತಾಯಿತು. ಅದರಲ್ಲಿ ಕನ್ನಡ ಸಾಹಿತ್ಯ, ಪ್ರಭಾವಶಾಲಿಯಾಗಿ ಬೆಳೆದುದೆಂದರೆ ಮೈಸೂರು ಅರಸರ ಆಶ್ರಯದಲ್ಲಿ ಅದರಲ್ಲಿಯೂ ಮುಖ್ಯವಾಗಿ ೧೭ನೇ ಶತಮಾನ ಅಂದರೆ ಚಿಕ್ಕದೇವರಾಜ ಒಡೆಯರ ಕಾಲ. ೧೭ ಮತ್ತು ೧೫ನೇ ಶತಮಾನಗಳನ್ನು ಬಿಟ್ಟರೆ ಇದೇ ಪ್ರಮುಖವಾದ ಘಟ್ಟ ನಂತರ ಷಡಕ್ಷರದೇವ ಅವರ ವೃಷಭೇಂದ್ರ ವಿಜಯ, ರಾಜಶೇಖರ ವಿಳಾಸ, ಶಿಖರ ಶಂಕರವಿಳಾಸಗಳು, ಪ್ರೌಢವೂ ಜನಪ್ರಿಯವೂ ಆಗಿ ಪರಿಣಮಿಸಿದವು. ತಿರುಮಲಾರ್ಯ ಚಿಕ್ಕುಪಾಧ್ಯಾಯರು ಮೊದಲಾದ ಅನೇಕ ಕವಿಗಳು

ಚಂಪೂಗ್ರಂಥಗಳನ್ನು ಬರೆದರು. ನಂತರ ಸಂಚಿಯ ಹೊನ್ನಮ್ಮನದು. ಚಿಕ್ಕದೇವರಾಜರ ಸಂಚಿಯ ಸಂಚಿಯ ಊಳಿಗದವಳಾಗಿದ್ದ ಆಕೆ ಪತಿವ್ರತಾ ಧರ್ಮವನ್ನು ಬೋಧಿಸುವ 'ಹದಿಬದೆಯ ಧರ್ಮ'ವನ್ನು ಸಾಂಗತ್ಯದಲ್ಲಿ ಬರೆದಿದ್ದಾಳೆ. ಈ ಎಲ್ಲ ಸಾಹಿತ್ಯದಲ್ಲಿ ಶ್ರಮ ಸಂಸ್ಕೃತಿಯ ಪ್ರತಿರೂಪಗಳು ಕಾಣುತ್ತೇವೆ. ೧೮-೧೯ನೇ ಶತಮಾನದಲ್ಲಿ ಪರಕೀಯರ ಆಳ್ವಿಕೆಗೆ ಸಿಕ್ಕಿ ಇಡೀ ಭರತಖಂಡ ರಾಜಕೀಯವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿ ದಾಸ್ಯದಿಂದ ನರಳತ್ತಾ ಇದ್ದ ಕತ್ತಲೆಯ ಕಾಲ ಅದು. ೧೯ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಕಿಡಿಸಿಡಿದ ಸ್ವಾತಂತ್ರ್ಯದ ಪ್ರಪ್ರಥಮ ಹೋರಾಟದೊಡನೆ ಭಾರತದ ನವ ಜಾಗೃತಿಯ ನಾಂದಿಯಾಯಿತು. ಬಡವಾಗಿದ್ದ ಜೀವನ ಎಚ್ಚತ್ತುಕೊಂಡಿದ್ದು ನವೋದಯದ ಮಂಗಳಗೀತೆಯನ್ನು ಹಾಡಿದ ಕವಿಗಳಲ್ಲಿ ಮುದ್ದಣ ಮತ್ತು ಬಸವಪ್ಪಶಾಸ್ತ್ರಿಗಳನ್ನು ಹೆಸರಿಸಬಹುದೆಂದು ತೋರುತ್ತದೆ. ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯ ವೃಕ್ಷ ಬಹುಶಾಖೆಗಳನ್ನು ಚಾಚಿ ಬೆಳೆಯತೊಡಗಿತು. ಇದಕ್ಕೆ ಇಂಗ್ಲೀಷ್ ಭಾಷೆಯ ಪ್ರಭಾವವೇ ಕಾರಣ. ಆಂಗ್ಲರ ಆಡಳಿತದಿಂದ ನಮಗೆಷ್ಟೇ ಹಾನಿ ಸಂಭವಿಸಿದ್ದರೂ, ಆಂಗ್ಲಭಾಷೆಯಿಂದ ಅಪಾರವಾದ ಪ್ರಯೋಜನ ಲಭಿಸಿತು. ಈ ಮಾತು ಕನ್ನಡಕ್ಕೆ ಮಾತ್ರವಲ್ಲ, ಎಲ್ಲ ದೇಶಭಾಷೆಗಳಿಗೂ ಅನ್ವಯಿಸುತ್ತದೆನ್ನಬಹುದು. ಇಂಗ್ಲೀಷ ಸಾಹಿತ್ಯವನ್ನು ಓದಿದ ನಮ್ಮ ಜನ ಅದರ ಸಾಧನೆಯ ಮತ್ತು ವೈವಿಧ್ಯಗಳಿಂದ ಹೊಸ ಪ್ರಚೋದನೆಯನ್ನು ಪಡೆದರು. ಅದರ ಫಲವಾಗಿ ಭಾವಗೀತೆಗಳು, ಕಾದಂಬರಿಗಳು, ಸಣ್ಣಕಥೆಗಳು, ಪ್ರಬಂಧಗಳು ಮತ್ತು ವಿಮರ್ಶೆ ಸಾಹಿತ್ಯ ಮೊದಲಾದ ಕವಲುಗಳಾಗಿ ಬೆಳೆಯಿತು.

ಬಿ.ಎಂ.ಶ್ರೀಕಂಠಯ್ಯನವರು ಅನುವಾದಿಸಿದ 'ಇಂಗ್ಲೀಷ ಗೀತೆಗಳು' ಕನ್ನಡ ಕಾವ್ಯ ಮಂದಿರದಲ್ಲಿ ಭಾವಗೀತೆಗಳ ಹೊಸಬಗೆಯ ಮಂಟಪವನ್ನು ನಿರ್ಮಿಸಿತು. ಅಲ್ಲದೆ ಕನ್ನಡದ ರಕ್ಷಣೆಗೆ ಅವರ ವ್ಯಕ್ತಿತ್ವ ಅಮರ ಸಂಜೀವಿನಿಯಾಯಿತು. ಕನ್ನಡದಲ್ಲಿ ಹೊಸಗಾಳಿ ಬೀಸತೊಡಗಿತು ಈ ವಸಂತದ ಹೊಸ ಹೊಸ ಭಾವಗೀತೆಗಳು ಝೇಂಕರಿಸಿದವು. ಕರ್ನಾಟಕದ ದಿವ್ಯವಾಣಿಯನ್ನು ಮೊಳಗಿಸಿದ ಮಹಾಕವಿ ಕುವೆಂಪು ಅವರಿಂದ ಶ್ರೀ ರಾಮಾಯಣ ದರ್ಶನಂ ಎಂಬ ಮಹಾಕಾವ್ಯವೂ ರಚಿತವಾಗಿ ಈ ಶತಮಾನದ ಕಾವ್ಯ ಸಾಹಿತ್ಯಕ್ಕೆ ಹೊಸ ಪ್ರೇರಣೆ ರೂಪ ತಂದುಕೊಟ್ಟಿತು. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ನಡೆದ ಸಾಧನೆಯೂ ಗಮನಾರ್ಹವಾದುದು ಶ್ರೀಗಳಾದ ಎಂ.ಎಸ್. ಪುಟ್ಟಣ್ಣ , ಗಳಗನಾಥ, ವೆಂಕಟಾಚಾರ್ಯ ಈ ಮೊದಲಾದವರಿಂದ ಬೆಳೆಯ ತೊಡಗಿದ ಕಾದಂಬರಿ ಸಾಹಿತ್ಯ ಬಹುಜನರ ಶ್ರಮ ಸಂಸ್ಕೃತಿಗಳನ್ನು ಕಾಣುತ್ತೆವೆ. ಶ್ರೀ.ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮೊದಲಾದ ಆಧುನಿಕ ಯುಗದ ಅತ್ಯಂತ ಸ್ಥೂಲವಾದ ಸಾಹಿತ್ಯ ರೂಪಗಳು ಬೆಳೆದವು.

ಒಟ್ಟಿನಲ್ಲಿ ಪಂಪನಿಂದ ಕುವೆಂಪುರವರೆಗೆ ಕನ್ನಡ ಸಾಹಿತ್ಯದ ಈ ನಿರಂತರ ಪ್ರವಾಹವನ್ನು ನೋಡಿದರೆ ಸಾಹಿತ್ಯವು ಜೀವನದ ಜೀವಂತಶಕ್ತಿಯಾಗಿ ರೂಪಗೊಂಡು ಬಂದಿರುವುದು ಕಾಣುತ್ತದೆ. ಆನ ಜೀವನದ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾ ಮುನ್ನಡೆದಿದೆ. ಜೀವನವನ್ನು ಮುನ್ನಡೆಸಿದೆ. ಸಮಾಜದ ಶಿಶುವಾಗಿ ಬೆಳೆದಿದೆ. ಗುರುವಾಗಿ ತಿಳಿಸಿದೆ. ಸಮಾಜದ ಸಂಸ್ಕೃತಿ ಪ್ರತಿಬಿಂಬದ ಜೊತೆಗೆ ಶ್ರಮ ಸಂಸ್ಕೃತಿಯ ಆದರ್ಶ ರೂಪಗಳನ್ನು ಹಾಕಿಕೊಟ್ಟಿದೆ. ಈ ಸಂಸ್ಕೃತಿಯ ಹೊಳಹನ್ನು ನೋಡುವುದಕ್ಕೆ ಹಿನ್ನಲೆಯಾಗಿ ಇಲ್ಲಿ ಸಾಹಿತ್ಯದ ಕೆಲವು ಘಟ್ಟಗಳನ್ನು ಅತಿಸ್ಥೂಲವಾಗಿ ನೋಡಲಾಯಿತು. ಇನ್ನೂ ಮುಂದೆ, ಕನ್ನಡ ಕಾವ್ಯಗಳು, ಶರಣರ ವಚನಗಳು, ದಾಸರ ಕೀರ್ತನೆಗಳು, ಹಾಡುಗಳು ಮತ್ತು ಅನುಭಾವಿಗಳ ಗೀತೆಗಳು – ಈ ಮೊದಲಾದವುಗಳಲ್ಲಿ ವ್ಯಕ್ತವಾದ ಶ್ರಮ ಸಂಸ್ಕೃತಿಯ ಚಿತ್ರವನ್ನು ಸಂಕ್ಷಿಪ್ತವಾಗಿ ವ್ಯಕ್ತಪಡಿಸಲಾಗಿದೆ.

■■

---

*ಸಹಾಯಕ ಪ್ರಾಧ್ಯಾಪಕರು ವಿ.ಎಂ.ಎಸ್.ಆರ್.ವಸ್ತ್ರದ ಕಲಾ ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.*

ಮಹಾವಿದ್ಯಾಲಯಗಳಲ್ಲಿ ಗುಣಮಟ್ಟದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ವಿಚಾರ ಸಂಕಿರಣದಲ್ಲಿ ಸಾದರಪಡಿಸಿದ ಅಭ್ಯಾಸಪೂರ್ಣ ಪ್ರಬಂಧಗಳು ಗ್ರಂಥ ರೂಪದಲ್ಲಿ ಪ್ರಕಟವಾಗಬೇಕೆಂದು ಒಂದು ವಿಚಾರ ಸಂಕಿರಣದಲ್ಲಿ ಹೇಳಿದ್ದೆ. ಇಂದು ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕನ್ನಡ, ಹಿಂದಿ, ಸಂಸ್ಕೃತ, ಮರಾಠಿ ಈ ನಾಲ್ಕು ಭಾಷೆಯ ಪುಸ್ತಕಗಳು ಪ್ರಕಟವಾಗಿದ್ದಕ್ಕಾಗಿ ಸಂಪಾದಕರಿಗೂ ಹಾಗು ಎಲ್ಲ ಪ್ರಾಧ್ಯಾಪಕರಿಗೂ ಅಭಿನಂದನೆಗಳು.

ಡಾ.ಎಂ.ಬಿ.ಪಾಟೀಲ
ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ಇಂದು ಮನುಷ್ಯ ಪುಸ್ತಕದಿಂದ ದೂರ ಉಳಿಯುತ್ತಿದ್ದಾನೆ, ಇಂಥ ಸಂದರ್ಭದಲ್ಲಿ 'ಭಾರತೀಯ ಸಾಹಿತ್ಯ : ಅಂತಾರಾಷ್ಟ್ರೀಯ ನೆಲೆಯಲ್ಲಿ' ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಿ ಯಶಸ್ವಿಗೊಳಿಸಿದ ಸಂಯೋಜಕರಾದ ಡಾ.ಎಸ್.ಟಿ.ಮೇರವಾಡೆ ಹಾಗೂ ಉತ್ತಮ ಲೇಖನಗಳನ್ನು ಸಂಕಲಿಸಿ ಕೃತಿರೂಪದಲ್ಲಿ ಪ್ರಕಟಿಸಿದ ಪ್ರಧಾನ ಸಂಪಾದಕರಾದ ಪ್ರೊ.ಬಿ.ಬಿ.ಡೆಂಗನವರ, ಡಾ.ಆರ್.ವಿ.ಪಾಟೀಲ ಹಾಗೂ ಅವರ ಬಳಗಕ್ಕೆ ಅನಂತ ಶುಭಾಶಯಗಳು.

ಶ್ರೀ ಜಿ.ಕೆ. ಪಾಟೀಲ
ಪ್ರಧಾನ ಕಾರ್ಯದರ್ಶಿಗಳು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ವಿಚಾರ ಸಂಕಿರಣಗಳು ಹೆಸರಿಗೆ ಮಾತ್ರವಾಗದೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನವಾಗಬೇಕೆಂದು ನಮ್ಮ ಸಂಸ್ಥೆಯ ಪ್ರಾಧ್ಯಾಪಕರಿಗೆ ಹೇಳಿದ್ದೆ. ಅದು ಇಂದು ಕಾರ್ಯ ರೂಪಕ್ಕೆ ಬಂದಿದೆ. ಇಲ್ಲಿ ಮಂಡಿತವಾದ ನೂರು ಜನ ಲೇಖಕರ ಸಂಪ್ರಬಂಧಗಳನ್ನು ಸಂಗ್ರಹಿಸಿ ಶಿಸ್ತುಬದ್ಧವಾಗಿ 'ಮಹೋನ್ನತ' ಎಂಬ ಶೀರ್ಷಿಕೆಯ ಕೃತಿಯನ್ನು ಸಂಪಾದಿಸುತ್ತಿರುವುದು ಸ್ವಾಗತಾರ್ಹ. ಇದು ಅತ್ಯಂತ ಸಂತೋಷಕರ ಕಾರ್ಯವಾಗಿರುವುದು. ಎಲ್ಲರಿಗೂ ಅಭಿನಂದನೆಗಳು.

ಪ್ರೊ. ಎಸ್.ಎಚ್. ಲಗಳಿ
ಆಡಳಿತಾಧಿಕಾರಿಗಳು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ಪ್ರಾಧ್ಯಾಪಕರು ಕೇವಲ ಪಾಠ ಮಾಡಿದರೆ ಸಾಲದು, ಹೊಸ ಹೊಸ ವಿಚಾರ ಹಾಗೂ ಸಂಶೋಧನಾತ್ಮಕ ಲೇಖನ, ಪುಸ್ತಕಗಳಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಬೇಕು. ಈ ದಿಸೆಯಲ್ಲಿ ನಮ್ಮ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳು ಗ್ರಂಥ ರೂಪದಲ್ಲಿ ಮುದ್ರಣಗೊಂಡದ್ದು ಒಂದು ಒಳ್ಳೆಯ ಕಾರ್ಯವಾಗಿದೆ. ಇದನ್ನು ಅಚ್ಚುಕಟ್ಟಾಗಿ ಯಶಸ್ವಿಗೊಳಿಸಿದ ಡಾ.ಎಸ್.ಟಿ.ಮೇರವಾಡೆ, ಹಾಗೂ ಸಿಬ್ಬಂದಿ ವರ್ಗಕ್ಕೂ ಮತ್ತು ಪ್ರಧಾನ ಸಂಪಾದಕರಿಗೂ ಅಭಿನಂದನೆಗಳು.

ಡಾ.ಕೆ.ಜಿ.ಪೂಜಾರಿ
ಪ್ರಾಚಾರ್ಯರು
ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

9 789383 813322
ISBN : 978-93-83813-32-2

ಸೌಮ್ಯ ಪ್ರಕಾಶನ, ವಿಜಯಪುರ